

ನೋಡುತ್ತಿದ್ದರು. ಅವರಿಗೆಲ್ಲ ಈ ಶ್ಯಾನುಭೋಗ ಸತ್ತ ಸುದ್ದಿ ತಿಳಿಯಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಸುದ್ದಿ ಪೇಟೆಗೆ ಬಂತು. ಮಂದಿ ಹೇಳಿದ್ದನ್ನು ಕೇಳಿ ತೃಪ್ತರಾಗದೇ ರಾಯಪ್ಪ ಪೇಟೆಯ ಕಡೆಗೆ 'ಬೀಡಿ'ಗೆಂದು ಬಂದಾಗ ಅವನನ್ನು ಕಂಡವರೆಲ್ಲ ಕರೆದು ನಿಲ್ಲಿಸಿ ಕೇಳಿದರು. ಇನ್ನು ಇಂಥ ಸುದ್ದಿ ತರಬಾರದಷ್ಟ ಎಂದು ಅನಿಸುವ ಹಾಗೆ ಕಾಡಿದರು. ಕೇಳಿದವರಿಗೆಲ್ಲ 'ಹೌದು'– 'ಅಲ್ಲ'– 'ಹೌದು' ಎಂದು ಹೇಳಿ ಪಾರಾಗಬೇಕಾದರೆ ಅವನಿಗೆ ಸಾಕಾಯಿತು.

ತಿರುಗಿ ರಾಯಪ್ಪ ಪೇಟೆಯಿಂದ ಮರಳಿ ಟಪಾಲು ಒಯ್ಯುವ ತಯ್ಯಾರಿಯಲ್ಲಿದ್ದ.

'ನಿನಗೆ ಯಾರು ಹೇಳಿದರೋ ಶ್ಯಾನುಭೋಗರು ಸತ್ತ ಸುದ್ದಿ?' ಎಂದು ಪೋಸ್ಟಮಾಸ್ತರರು ಕೇಳಿದರು.

'ತದಡಿಯ ವೈಕುಂಠ ಪ್ರಭುಗಳು.'

'ಏನಾಗಿತ್ತಂತೆ?'

'ಸಾಯಲಿಕ್ಕೆ ಏನಾಗಬೇಕ್ರೀ? ಈ ಮಳೆಗಾಲಕ್ಕೆ ಬರುವ ವ್ಯಾಧಿಗೇನು ಕಡಮೆಯೇ– ನನಗೆ ನೋಡಿ ಇದ್ದಕ್ಕಿದ್ದ ಹಾಗೆ ಸೊಂಟ ಹಿಡಿದು ಬಿಟ್ಟಿದೆ. ಮೈಯೆಲ್ಲಾ ನೋವು. ಕೆಟ್ಟ ದಣಿವು– ಏನಾದರೂ ಒಂದು ಇದ್ದೇ ಇದೆ ಈ ಸಂಸಾರದಲ್ಲಿ, ಕರಕರೆ– ತಾಪತ್ರಯ... ಏನೋ ಅಂದಿದ್ರು ಅವರು. ನನಗೆ ನೆನಪೇ ಉಳಿಯಲಿಲ್ಲ... ನನಗೂ ಈ ಕೆಟ್ಟ ಹಂಬಲ ನೋಡಿ. ಮುಂಜಾನೆ ಉಂಡಿದ್ದು ಈಗ ನೆನಪು ಇರುವದಿಲ್ಲ... ಅಂತೂ ಸತ್ತ ನೋಡಿ. ವೈಕುಂಠ ಪ್ರಭುಗಳು ಹೇಳಿದ ಕೂಡಲೇ ನನಗಂತೂ ಎದೆಯ ಮೇಲೆ ಗುದ್ದೇ ಹೊಡೆದಹಾಗಾಯಿತು' ಎಂದು ಮುಂತಾದವುಗಳನ್ನು ಹೇಳಿ ಸತ್ತ ಕಾರಣವನ್ನು ಅರಿಯದಿದ್ದರೂ ಒಂದಕ್ಕೊಂದು ಮಾತು ಕೂಡಿಸಿ ಇನ್ನೊಂದು ಮಾತು ಪೋಸ್ಟಮಾಸ್ತರರು ಎತ್ತಲಾರದ ಹಾಗೆ ಮಾಡಿಬಿಟ್ಟ.

'ಇಂಥವೆಲ್ಲ ಬೇಕು ನೋಡು... ನಿನಗೆ'– ಎಂದು ಅನ್ನುತ್ತಿದ್ದಂತೆಯೇ ಒಳಗಿಂದ ಚಹಕ್ಕೆ ಕರೆ ಬಂದುದರಿಂದ ಪೋಸ್ಟಮಾಸ್ತರರು ಮಾತು ಅಲ್ಲಿಗೇ ಬಿಟ್ಟು ಒಳಗೆಹೋದರು.

ರಾಯಪ್ಪ ಕೂಡ ಚೀಲಕ್ಕೆ ಸೀಲು ಹಾಕಿ